MR. SPEAKER : I think you are an Advocate. The cause of action has arisen because they have not observed all these norms. They have violated. I am moving on the next subject. ತಾವು ಪುನಃ ಅದನ್ನೇ ಕೇಳಿದರೆ, ಹೇಗೆ?

ಭಾರತೀ ನಗರದಲ್ಲಿ ಪದವಿ ಪೂರ್ವ ಕಾಲೇಜು

278 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿರತಕ್ಕ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಮಹಿಳೆಯರಿಗಾಗಿಯೇ ಪ್ರತ್ಯೇಕವಾಗಿ ಇರತಕ್ಕ ಸರ್ಕಾರಿ ಹಾಗೂ ಖಾಸಗೀ ಪದವಿಪೂರ್ವ ಕಾಲೇಜುಗಳೆಷ್ಟು?

ಇ) 1994-95ರಲ್ಲಿ ಹೊಸದಾಗಿ ಸರ್ಕಾರ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆಯೇ ಹಾಗೂ ಖಾಸಗೀ ಪದವಿಪೂರ್ವ ಕಾಲೇಜುಗಳಿಗೆ ಅನುಮತಿ ನೀಡಲಾಗಿದೆಯೇ?

ಈ) ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಅ) ಬೆಂಗಳೂರಿನ ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಸರ್ಕಾರ ಪದವಿ ಪೂರ್ವ ಕಾಲೇಜು ಇರುವುದಿಲ್ಲ.

ಆ)

ಸರ್ಕಾರಿಖಾಸಗಿ

ಯಾವುದು ಇಲ್ಲ 1(ಒಂದು)

ಇ) ಈ ಕ್ಷೇತ್ರದಲ್ಲಿ 1994-95ರಲ್ಲಿ ಹೊಸದಾಗಿ ಸರ್ಕಾರ ಯಾವುದೇ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಿರುವುದಿಲ್ಲ. ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಅನುಮತಿ ನೀಡಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್. ರಾಜಣ್ಣ : ಬೆಂಗಳೂರಿನಲ್ಲಿ ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿರತಕ್ಕಂತಹ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು? ಇವುಗಳ ಪೈಕಿ ಮಹಿಳೆಯರಿಗಾಗಿ ಪ್ರತ್ಯೇಕವಾಗಿರತಕ್ಕಂತಹ ಸರ್ಕಾರಿ ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜುಗಳು ಎಷ್ಟು? ಸ್ವಾಮಿ ನನ್ನ ಕ್ಷೇತ್ರದಲ್ಲಿ ಯಾವುದು ಕಾಲೇಜು ಒಂದೂ ಇಲ್ಲ, ದಯವಿಟ್ಟು ನಾನು ತಮ್ಮಲ್ಲಿ ವಿನಂತಿ ಮಾಡತಕ್ಕಂಥಾದ್ದು ಏನೆಂದರೆ, ಅಲ್ಲಿ ಕೆಲವು ಹೈಸ್ಕೂಲುಗಳಲ್ಲಿ ಮಕ್ಕಳು ಕಡಿಮೆಯಾಗಿದ್ದಾರೆ. ಅಂತಹದ್ದನ್ನು ಎಲ್ಲಿ ಪಾಠಶಾಲೆಯಲ್ಲಿ ಮಕ್ಕಳು ಕಡಿಮೆಯಾಗಿದ್ದಾರೆ ಅದನ್ನು ಕಾಲೇಜು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಒಂದು ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭ ಮಾಡದೆ ಖಾಸಗಿ ಪದವಿ ಪೂರ್ವ ಕಾಲೇಜಿಗೆ ಅನುಮತಿ ನೀಡಲಾಗಿದೆ ಎಂದು ಕಳೆದ ವರ್ಷ ಹೇಳಿದ್ದಾರೆ. ಅಲ್ಲಿಗೂ ಅದು ಆಗಿಲ್ಲ, ಇದು ಪೆಂಡಿಂಗ್ ಇದೆ ಎಂದು ಗೊತ್ತಾಗಿದೆ. ದಯವಿಟ್ಟು ನಾನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಗೆ ಅಧ್ಯಕ್ಷರ ಮೂಲಕ ಕೇಳಿಕೊಳ್ಳುವುದೇನೆಂದರೆ, ನನ್ನ ಭಾರತಿ ನಗರ ಕ್ಷೇತ್ರ ಬಡವರು ಇರುವ ಕ್ಷೇತ್ರ. ಗುಡಿಸಲು ವಾಸಿಗಳು ಇರುವ ಕ್ಷೇತ್ರ. ಆದ್ದರಿಂದ ಅವರು ಖಾಸಗಿ ಕಾಲೇಜಿಗೆ ಹೋಗುವ ಮಟ್ಟದಲ್ಲಿ ಇಲ್ಲ,

ದಯವಿಟ್ಟು ಸರ್ಕಾರದಿಂದ ಎಲ್ಲಿ ಮಕ್ಕಳು ಹೈಸ್ಕೂಲ್‌ನಲ್ಲಿ, ಮಿಡ್ಲ್ ಸ್ಕೂಲಿನಲ್ಲಿ ಮಕ್ಕಳು ಕಡಿಮೆ ಇದ್ದಾರೋ ಅದನ್ನು ಕಾಲೇಜಾಗಿ ಪರಿವರ್ತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಬಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಖಾಸಗಿ ಆಡಳಿತ ವ್ಯವಸ್ಥೆಗೆ ಒಳಪಟ್ಟಿದ್ದು ಒಂದು ಮಾತ್ರ ಇದೆ. ಇನ್ನು ಬಾಕಿ ಕಡೆಗಳಲ್ಲಿ ಹೆಚ್ಚಾಗಿ ಇಲ್ಲ ಎಂದು ಅವರು ಏನು ಕೇಳುತ್ತಿದ್ದಾರೆ ಇದನ್ನು ಪರಿಶೀಲನೆ ಮಾಡಿ ಅವಶ್ಯಕತೆ ಇದ್ದರೆ ಖಂಡಿತ ಮಾಡಿಕೊಡುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಆದ ಅರಣ್ಯ ಉತ್ಪನ್ನ

281 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94 ಹಾಗೂ 1994-95ರ ಸಾಲುಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯದಿಂದ ಆದ ಉತ್ಪನ್ನವೆಷ್ಟು?

ಆ) ಅರಣ್ಯ ಬೆಳೆಸಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು ಹಾಗೂ ಈ ಕಾರ್ಯಕ್ರಮಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ)

	ವರ್ಷ	ಉತ್ಪನ್ನ:	ಆದಾಯ
1.	1993-94	ರೂ.	44.89 ಕೋಟಿ
2.	1994-95	ರೂ.	40.32 ಕೋಟಿ

ಆ) ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆಯಡಿಯಲ್ಲಿ ಬ್ರಿಟಿಷ ಸರ್ಕಾರ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ (ಓಡಿಎ) ನೆರವಿನೊಂದಿಗೆ 6 ವರ್ಷಗಳ ಅವಧಿಯಲ್ಲಿ 42,000 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಮಾದರಿಯ ನಡುತೋಪುಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ರೂ. 84.20 ಕೋಟಿ ಆಗಿರುತ್ತದೆ.

ಪ್ರಾದೇಶಿಕ ವಿಭಾಗಗಳ ಯೋಜನೆಯಡಿಯಲ್ಲಿ 1993 ಮತ್ತು 1994ರ ಮಳಗಾಲದಲ್ಲಿ 15,852 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪು ಬೆಳೆಸಲಾಗಿದೆ. 1995ನೇ ಮಳೆಗಾಲದಲ್ಲಿ ನೆಡುತೋಪು ಬೆಳೆಸಲು 7842 ಹೆಕ್ಟೇರ್ ಪ್ರದೇಶದಲ್ಲಿ 81 ಲಕ್ಷ ಸಸಿಗಳನ್ನು ಬೆಳೆಸಲಾಗಿರುತ್ತದೆ. ಈ ಯೋಜನೆಗಾಗಿ ಈವರೆವಿಗೆ 1870.52 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿರುತ್ತದೆ.

ಇದಲ್ಲದೆ ಸಾಮಾಜಿಕ ಅರಣ್ಯ ಯೋಜನೆಗಳಡಿಯಲ್ಲಿ 1993-94 ಮತ್ತು 94-95ನೇ ಸಾಲಿನಲ್ಲಿ ಕ್ರಮವಾಗಿ 1638 ಹೆಕ್ಟೇರ್ ಹಾಗೂ 1850 ಹೆಕ್ಟೇರ್ ನೆಡುತೋಪನ್ನು ಬೆಳೆಸಲಾಗಿದೆ. 1995ನೇ ಮಳೆಗಾಲದಲ್ಲಿ ನೆಡುತೋಪುಗಳನ್ನು ಬೆಳೆಸಲು 640 ಹೆಕ್ಟೇರ್ ಪ್ರದೇಶದಲ್ಲಿ 8 ಲಕ್ಷ ಸಸಿಗಳನ್ನು ಬೆಳೆಸಲಾಗಿರುತ್ತದೆ. ಈ ಉದ್ದೇಶಕ್ಕಾಗಿ ಜಿಲ್ಲಾ ಪಂಚಾಯತ್‌ನವರು ಕಳೆದ 3 ವರ್ಷಗಳಲ್ಲಿ ರೂ. 222.50 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ಅದನ್ನು ಖರ್ಚು ಮಾಡಲಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡ 80ರಷ್ಟು ಅರಣ್ಯ ಭೂಮಿ ಇದೆ. ಕಳೆದ ಹತ್ತಾರು ವರ್ಷಗಳಿಂದ ಅರಣ್ಯ ಬೆಳೆಸುವುದಕ್ಕೋಸ್ಕರವಾಗಿ ಸರ್ಕಾರ ಸಾಕಷ್ಟು ಜಮೀನನ್ನು ತೆಗೆದುಕೊಂಡು ಅರಣ್ಯ